## ಡಾಕ್ಟ್ರೇ, ನನ್ನ ಗುರ್ತು ಸಿಕ್ತಾ?

ಇಲ್ಲವಲ್ಲಾ..!

ಡಾಕ್ಟ್ರೇ, ನಾನು ಇಪ್ಪತ್ತು ವರ್ಷಗಳ ಹಿಂದೆ ನಿಮ್ಮ ಕ್ಲಿನಿಕ್‌ಗೆ ಬಂದಿದ್ದೆ. ಆಗ ನೀವು ನನಗೆ ತಲೆನೋವು ಇದ್ರೆ ತಗೊಳ್ಳಿ ಅಂತ ಹೇಳಿ ಒಂದು ಮಾತ್ರೆ ಬರೆದು ಕೊಟ್ಟಿದ್ರಿ. ಇವತ್ತಿಗೂ ಅದನ್ನೇ ದಿನಾಲೂ ತಗೋತಿದ್ದೀನಿ  ಡಾಕ್ಟ್ರೇ..

ಹೀಗಂದು, ಹಲ್ಲುಗಿಂಜುತ್ತಾ ನಿಂತಿದ್ದ ಆಸಾಮಿಯನ್ನು ನೋಡಿ, ಕಕ್ಕಾಬಿಕ್ಕಿಯಾದ ವೈದ್ಯರು 'ಅಯ್ಯೋ.. ಇಪ್ಪತ್ತು ವರ್ಷಗಳಿಂದಲೂ ದಿನಾ ತಗೋತಿದ್ದೀರಾ? ಯಾಕೆ?' ಎಂದರು.

'ಡಾಕ್ಟ್ರೇ, ಆಮೇಲೆ ನಾನು ಮದುವೆ ಆಗಿ ಬಿಟ್ನಲ್ಲಾ.. ಹಾಗೇ ದಿನಾಲೂ ನನ್ನ ಜೊತೆನೇ ತಲೆನೋವು ಇರೋವಾಗ ಮಾತ್ರೆ ಬೇಕಾಗುತ್ತಲ್ವಾ!'

—ಇದೊಂದು ಜೋಕ್. ಹೆಂಡತಿ ಹಾಗೂ ಅವಳ ತಲೆಬೇನೆ ಸೃಷ್ಟಿಸುವ ತಾಕತ್ತಿನ ಬಗೆಗಿನ ಜೋಕು ಎಂದು ಲಘುವಾಗಿ ಪರಿಗಣಿಸಿ, ನಾವು ನಕ್ಕು ಹಗುರಾಗಿ ಬಿಡಬಹುದು. ಆದರೆ ಕಾಲ್ಪನಿಕ ಹಾಸ್ಯದ ಹಿಂದಿರುವ ವಾಸ್ತವಿಕ ದುರ್ಗಮ ದುರಂತವನ್ನು ಕಡೆಗಾಣಿಸುವಂತಿಲ್ಲ. ಯಾಕೆಂದರೆ ಇಂದು ಲಕ್ಷಾಂತರ ಜನ, ವಿಶ್ವದಾದ್ಯಂತ, ಈ ರೀತಿಯೇ ಪರಿಹಾರ ಹಾಗೂ ಚಿಕಿತ್ಸೆಗೆಂದು  ಕೊಟ್ಟ ಮಾತ್ರೆಗಳನ್ನು ತಮಗಿಷ್ಟ ಬಂದಂತೆ, ಇತಿಮಿತಿಯ ಅರಿವೂ ಇಲ್ಲದೇ ಬಳಸುತ್ತಿದ್ದಾರೆ. ಮಿತಿ ಮೀರಿದ ದುರ್ಬಳಕೆ ನಡೆದಿದೆ. ಈ ರೀತಿ, ಹೇಳುವವರು ಕೇಳುವವರು ಯಾರೂ ಇಲ್ಲ ಎಂಬಂತೆ, ವೈದ್ಯರು ಬರೆದ ಮಾತ್ರೆಯನ್ನೇ ಸದಾ ಕಾಲ ಉಪಯೋಗಿಸುವ ಚಾಳಿಗೆ ವೈದ್ಯಕೀಯ ಔಷಧೀಯ ದುರ್ಬಳಕೆ (**prescription drug abuse**) ಎಂದು ವೈದ್ಯ ವಿಜ್ಞಾನ ಹೆಸರಿಟ್ಟು ಕರೆಯುತ್ತದೆ.

ಎಲ್ಲರಿಗೂ ಅವರವರ ಸಮಸ್ಯೆಗೆ ಒಂದಲ್ಲ ಒಂದು ಸಮಯದಲ್ಲಿ ವೈದ್ಯರನ್ನು ಕಾಣುವ ಕಷ್ಟಕರ ಹಾಗೂ ಅನಿವಾರ್ಯ ಪರಿಸ್ಥಿತಿ ಬಂದೇ ಬರುತ್ತದೆ. ಆಗೆಲ್ಲಾ, ವೃತ್ತಿಪರ ವೈದ್ಯರಿಂದ ತಪಾಸಣೆಗೆ ಒಳಗಾಗಿ, ತದನಂತರ ಅವರು ಬರೆದು ಕೊಟ್ಟ ಔಷಧಿಯನ್ನು ನಿರ್ದಿಷ್ಟವಾಗಿ, ಹೇಳಿದ ಸಮಯಕ್ಕೆ ಸರಿಯಾಗಿ, ಸೂಚಿಸಿದ ಪ್ರಮಾಣದಲ್ಲೇ ತೆಗೆದುಕೊಂಡರೆ ಅದನ್ನು ಬಳಕೆ ಅನ್ನುತ್ತಾರೆ. ಆದರೆ, ವೈದ್ಯರು ಕೊಟ್ಟ ಮಾತ್ರೆಗಳನ್ನು ತಮಗಿಷ್ಟ ಬಂದ ರೀತಿಯಲ್ಲಿ, ಕಾಲಾವಧಿ ಮೀರಿದ ನಂತರವೂ ಬಳಸುವವರಿದ್ದಾರೆ. ಜತೆಗೆ ಔಷಧದ ಪ್ರಮಾಣವನ್ನು ಬೇಕಾದ ಹಾಗೆ ಬದಲಿಸಿ, ಯಾವಯಾವತ್ತೋ ತಿನ್ನುವವರಿದ್ದಾರೆ; ಅದು ದುರ್ಬಳಕೆ.

ನಮ್ಮಲ್ಲಿ ಇನ್ನೂ ಒಂದು ವರ್ಗವಿದೆ. ಸಂಬಂಧಿಕರೋ, ಪಕ್ಕದ ಮನೆಯವರೋ ಯಾವುದೋ ಒಂದು ಔಷಧಿಯ ಬಗ್ಗೆ ಹೊಗಳಿದರು ಎಂದಿಟ್ಟುಕೊಳ್ಳಿ– 'ನನಗೂ ಇದೇ ತೊಂದರೆಯಿದೆ. ಎಲ್ಲಿ ಚೀಟಿ ಕೊಡಿ' ಎಂದು ಆ ಚೀಟಿಯನ್ನು ಇಸಿದುಕೊಂಡು ತಾವೂ ಅದೇ ಔಷಧಿಯನ್ನು ಸೇವಿಸುತ್ತಾರೆ! ಇವರು ಜಾಣ ಜಿಪುಣರು; ಸ್ವಯಂ ವೈದ್ಯರು. 'ಸುಮ್ಮನೆ ಡಾಕ್ಟರ್ ಬಳಿ ಹೋದರೆ ದುಡ್ಡು ದಂಡ' ಎನ್ನುವುದು ಇವರ ಜಾಣತನ. ಇದೂ ಔಷಧಿಯ ದುರ್ಬಳಕೆಯೇ. ಈ ಎರಡು ಗುಂಪಿಗೂ ಸೇರದ ಇನ್ನೊಂದು ಗುಂಪಿದೆ. ಇವರು ಯಾವುದೇ ಸಮಸ್ಯೆ ಅಥವಾ ವೈದ್ಯಕೀಯ ತೊಂದರೆ ಇರದಿದ್ದರೂ

